**OS.No.**14/2018 **PW**-1

**ದಿನಾಂಕಃ 11.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ. ಕೆ ಕೆ ಆರ್ . ವಕೀಲರಿಂದ**

ನನ್ನ ಗಂಡನ ಪಿ ಎಫ್ ಹಣ ಪಡೆಯುವಾಗ 2ನೇ ಪ್ರತಿವಾದಿಯ ಕಾಲೇಜಿಗೆ ಪತ್ರ ವ್ಯವಹಾರ ಮಾಡಿದ್ದೇನೆ ಎಂದರೆ ಸರಿ. ಆ ಸಮಯಕ್ಕೆ ನಾನು ನನ್ನ ಮನವಿ ಪತ್ರದೊಂದಿಗೆ ದಾಖಲಾತಿಗಳನ್ನು ಕೊಟ್ಟಿದ್ದೆ ಎಂದರೆ ಸಾಕ್ಷಿ ನಾನು ಕೊಟ್ಟಿಲ್ಲ ಕಛೇರಿಯಲ್ಲಿಯೇ ಇದ್ದವು ಎಂದರು ನುಡಿಯತ್ತಾರೆ. ಸಂಸ್ಥೆಯವರು ನಮಗೆ ಭವಿಷ್ಯ ನಿಧಿಯ ಎಲ್ಲಾ ಹಣವನ್ನು ನನಗೆ ಮತ್ತು ನನ್ನ ಮಗಳಿಗೆ ಸಂದಾಯ ಮಾಡಿರುತ್ತಾರೆ ಎಂದರೆ ಸಾಕ್ಷಿ ಮುಕ್ಕಾಲು ಭಾಗ ಕೊಟ್ಟಿದ್ದಾರೆ ಉಳಿದ್ದದ್ದು ಇನ್ನೂ ಬಾಕಿ ಇದೆ ಎಂದು ನುಡಿಯತ್ತಾರೆ . ಭವಿಷ್ಯ ನಿಧಿಯ ಸಂಬಂಧ ನಾನು ಕಾರ್ಯದರ್ಶಿಯವರಿಗೆ ನಾನು ನೋಟೀಸು ಕೊಟ್ಟಿದ್ದೆ. ಇನ್ನೂ ಕೆಲವು ದಾಖಲಾತಿಗಳನ್ನು ಕೊಡಬೇಕು ಎಂದು ಸಂಸ್ಥೆಯ ಕಾರ್ಯದರ್ಶಿಗಳು ನನಗೆ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸರಿ .

ದಿನಾಂಕ 08.03.2010 ರಂದು ನಾನು ಸಂಸ್ಥೆಯ ನಿರ್ದೇಶಕಿಯಾಗುವಂತೆ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿ . ನಾನು ಸಂಸ್ಥೆಯಿಂದ ಯಾವುದೇ ಪ್ರತಿಫಲಾಪೇಕ್ಷೆ ಪಡೆಯದೆ ಸರ್ಕಾರಿ ಕೆಲಸಕ್ಕೆ ಚ್ಯುತಿ ಬರದಂತೆ ಕೆಲಸ ಮಾಡುತ್ತೇನೆ ಎಂದು ಬಿ ಇ ಓ ರವರಿಗೆ ಅಫಿಡವಿಟ್ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ನಿರ್ದೇಶಕಿಯಾಗಿ ಕೆಲಸ ಮಾಡುವಾಗ ಪ್ರತಿಫಲಾಪೇಕ್ಷೆ ಪಡೆಯುವುದಿಲ್ಲ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ . 3ನೇ ಪ್ರತಿವಾದಿಯೊಂದಿಗೆ ನಾನು ಕೆಲವೊಂದು ಪತ್ರ ವ್ಯವಹಾರ ಮಾಡಿದ್ದೇನೆ ಎಂದರೆ ಹೌದು . ಖಾತೆ ಮಾಡಲು ನಾನು ತಕರಾರು ಸಲ್ಲಿಸಿದ್ದಾಗ ಹಳ್ಳಿಮೈಸೂರು ಪಿ ಡಿ ಓ ರವರು ವಿಚಾರಣೆಗೆ ಬರುವಂತೆ ನನಗೆ

ನೋಟೀಸು ಕೊಟ್ಟಿದ್ದರು ಎಂದರೆ ಸರಿ . ನಾನು ತಕರಾರು ಸಲ್ಲಿಸುವುದಕ್ಕಿಂತ ಮೊದಲು ದಾವಾ ಆಸ್ತಿಯ ಖಾತೆಗಳು ಭಾರತ್ ಯುನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜನ್ನು ಪ್ರತಿನಿಧಿಸುವ ಕೆ ವಿ ಮಂಜುನಾಥ ಅಧೀಕ್ಷಕರು ಹಾಗೂ ಕೆ ವಿ ಶಂಭುಲಿಂಗಪ್ಪ ಕಾರ್ಯದರ್ಶಿ ಎಂಬುದಾಗಿ ಇದ್ದವು ಎಂದರೆ ಸರಿಯಲ್ಲ. ಹಾಗಾದರೆ ತಕರಾರು ಕೊಡುವುದಕ್ಕಿಂತ ಮೊದಲು ಯಾರ ಹೆಸರಿನಲ್ಲಿ ಖಾತೆ ಇದ್ದವು ಎಂದರೆ ಸಾಕ್ಷಿ ಕೆ ವಿ ಮಂಜುನಾಥ ಹಾಗೂ ಕೆ ವಿ ಶಂಭುಲಿಂಗಪ್ಪ ಅವರ ಜಂಟಿ ಖಾತೆಯಲ್ಲಿ ಇದ್ದವು ಎಂದು ನುಡಿಯುತ್ತಾರೆ . ಈ ರೀತಿ ಜಂಟಿ ಖಾತೆಯಲ್ಲಿ ದಾವಾ ಆಸ್ತಿಯ ಖಾತೆಗಳು ಇದ್ದ ಸಂದರ್ಭದಲ್ಲಿ ಅವರಿಬ್ಬರೂ ಭಾರತ್ ಯುನಿವರ್ಸಲ್ ಶಿಕ್ಷಣ ಸಂಸ್ಥೆಯ ಅಧೀಕ್ಷಕರು ಮತ್ತು ಕಾರ್ಯದರ್ಶಿ ಅಂತ ಕೆಲಸ ಮಾಡುತ್ತಿದ್ದರು ಎಂದರೆ ಸರಿ .

ದಾವಾ ಅನುಸೂಚಿ ಸ್ವತ್ತುಗಳಲ್ಲಿ ಕಟ್ಟಿರುವ ಕಟ್ಟಡಗಳ ಜಾಗವು ಮಂಜುನಾಥ ಹಾಗೂ ಶಂಭುಲಿಂಗಪ್ಪ ಅವರು ಜಂಟಿಯಾಗಿ ಖರೀದಿಸಿದ ಜಾಗ ಎಂದರೆ ಸರಿಯಲ್ಲ. ನಂತರ ಸಾಕ್ಷಿ ಜಾಗವನ್ನು ಮಾತ್ರ ಜಂಟಿಯಾಗಿ ಖರೀದಿಸಿದ್ದು ಕಟ್ಟಡಗಳನ್ನು ಆಮೇಲೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಕ್ರಯಪತ್ರದಲ್ಲಿ ಸಂಸ್ಥೆಯ ಹಾಲೀ ಅಧೀಕ್ಷಕರು ಕೆ ವಿ ಮಂಜುನಾಥ್ ಹಾಗೂ ಹಾಲೀ ಕಾರ್ಯದರ್ಶಿ ಶಂಭುಲಿಂಗಪ್ಪ ಅವರಿಗೆ ಕ್ರಯಕ್ಕೆ ಕೊಡಲು ಉಲ್ಲೇಖ ಇದೆ ಎಂದರೆ ಸಾಕ್ಷಿ ಹೌದು ಆದರೆ ಅವರಿಬ್ಬರೂ ಸಂಸ್ಥೆಯನ್ನು ಪ್ರತಿನಿಧಿಸುವ ವ್ಯಕ್ತಿಗಳು ಎಂದು ಪತ್ರದಲ್ಲಿ ಬರೆದಿಲ್ಲ ಎಂದು ನುಡಿಯುತ್ತಾರೆ. ರಾಷ್ಟ್ರೀಯ ಶಿಕ್ಷಕರ ತರಬೇತಿ ಸಂಸ್ಥೆಯ ನಿಯಮಾನುಸಾರ ಕಟ್ಟಡ ಕಟ್ಟಬೇಕು ಎಂಬ ಉದ್ದೇಶದಿಂದ ಆಸ್ತಿಯನ್ನು ಖರೀದಿಸಲಾಗಿದೆ

ಎನ್ನುವ ಉಲ್ಲೇಖ ಖರೀದಿ ಪತ್ರದಲ್ಲಿ ಇದೆ ಎಂದರೆ ಸರಿ. ಶ್ಯಡೂಲ್ ಆಸ್ತಿಯನ್ನು ಖಾತೆ ಮಾಡಿಸಿಕೊಂಡು ಇದರಲ್ಲಿ ಶಾಲಾ ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ನಿರ್ಮಾಣ ಮಾಡಿಕೊಂಡು ನೀವು ಸಂಸ್ಥೆಯ ಉಪಯೋಗಗಳಿಗೆ ಅವಶ್ಯಕತೆಗೆ ತಕ್ಕಂತೆ ಕಟ್ಟಡ ಉಪಯೋಗಿಸಿಕೊಂಡು ಹಕ್ಕುದಾರರಾಗಿ ಅನುಭವಿಸಿಕೊಂಡು ಹೋಗಬೇಕು ಎಂದು ಸದರಿ ಕ್ರಯ ಪತ್ರದಲ್ಲಿ ಉಲ್ಲೇಖಿಸಲಾಗಿದೆ ಎಂದರೆ ಸರಿ.

ಶ್ರೀ. ಕೆ.ಕೆ.ಆರ್. ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.